## ಮಾಧ್ಯಮಗಳಿಗೆ 'ಗ್ರಹಣ'

ಸೂರ್ಯಗ್ರಹಣ, ಚಂದ್ರಗ್ರಹಣ ಒಂದು ಪ್ರಾಕೃತಿಕ ವಿದ್ಯಮಾನ. ವೈಜ್ಞಾನಿಕವಾಗಿಯೂ, ಜೋತಿಷಿಗಳ ಪ್ರಕಾರವೂ ಅವು ಕರಾರುವಕ್ಕಾಗಿ ಘಟಿಸುತ್ತವೆ. ಕೆಲವೊಂದು ಧಾರ್ಮಿಕ ಆಚರಣೆಗಳನ್ನು ನಂಬಿಕೆ ಇದ್ದವರು ಮಾಡುತ್ತಾರೆ. ಅದು ಅವರ ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯ. ಆದರೆ ನಮ್ಮ ಸುದ್ದಿ ಮಾಧ್ಯಮದವರು ಗ್ರಹಣದ ದಿನದಂದು ಇಡೀ ದಿನ ಜೋತಿಷಿಗಳನ್ನು ಕೂರಿಸಿಕೊಂಡು ಗ್ರಹಣದ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡಿ ಜನರಲ್ಲಿ ಭೀತಿಯನ್ನುಂಟು ಮಾಡಲು ಇನ್ನಿಲ್ಲದಂತೆ ಪ್ರಯತ್ನಿಸಿದರು. ಗ್ರಹಣದ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಿಸಿದವರು ಕಡಿಮೆ ಎಂದೇ ಹೇಳಬೇಕು. ಜನರನ್ನು ಎಚ್ಚರಿಸಬೇಕಾದ ಮಾಧ್ಯಮಗಳು ಮೌಢ್ಯದತ್ತ ತಳ್ಳುವುದನ್ನು ನೋಡಿ ವಿಷಾದ ಎನಿಸಿತು.

—ಬಿಲ್ಲೇಶ್ವರ ಅಚ್ಚು, ಹುಂಚ

## ಮಾತಿನ ಹಬ್ಬ

ದಿಗ್ವಿಜಯ ವಾಹಿನಿಯಲ್ಲಿ ಪ್ರಸಾರವಾದ 'ಕೃಷ್ಣೇಗೌಡರ ಮಾತಿನ ಹಬ್ಬ' ತುಂಬಾ ಅದ್ಭುತವಾಗಿ ಮೂಡಿಬಂತು. ಖ್ಯಾತ ವಾಗ್ಮಿಯಾದ ಕೃಷ್ಣೇಗೌಡರ ಮಾತಲ್ಲಿ ಕವಿ, ಕವಿತೆಗಳ ಬಗ್ಗೆ ಕೇಳುವುದೇ ಚೆಂದ, ಜೊತೆಗೆ ಹಾಡುಗಳು ಮುದಕೊಟ್ಟವು. ಒಟ್ಟಾರೆ ಅಚ್ಚುಕಟ್ಟಾಗಿ ಮೂಡಿಬಂತು. ಮುಂದಿನ ವಾರಕ್ಕೂ ಕಾಯುವಂತಾಗಿದೆ.

—ಸುಲೋಚನಾ ವಾದಿರಾಜ್, ಶಿವಮೊಗ್ಗ

## ಮತ್ಸರ ಕುಟುಂಬ

ಕಲರ್ಸ್ ಕನ್ನಡ ವಾಹಿನಿಯ 'ಅನುಬಂಧ' ಪ್ರಶಸ್ತಿಯಲ್ಲಿ ಒಂದು 'ಮನ ಮೆಚ್ಚಿದ ಕುಟುಂಬ/ ಸಂಸಾರ' ಎಂಬುದಾಗಿದೆ. ನಿಜವಾಗಿಯೂ, 'ಮಜಾ ಟಾಕೀಸ್' ಹೊರತುಪಡಿಸಿ ಇನ್ಯಾವುದಾದರೂ ಸಂಸಾರ ಮನಮೆಚ್ಚುವಂತಿದೆಯೆ ಎಂಬ ಪ್ರಶ್ನೆಗೆ ವಾಹಿನಿಯವರು ಉತ್ತರಿಸುತ್ತಾರಾ? ಮತ್ಸರ, ದ್ವೇಷ, ಸಿಟ್ಟು, ಜಗಳ, ಹಿಂಸೆ, ಅತಿಯಾದ ತ್ಯಾಗ, ನೋವು, ಅಳುಗಳೇ ತುಂಬಿರುವ ಇಂತಹ ಧಾರಾವಾಹಿಗಳಲ್ಲಿನ ಸಂಸಾರಗಳು ಮೆಚ್ಚುಗೆಯಾಗಲು ಸಾಧ್ಯವೇ ಇಲ್ಲ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ವಾರದ ಪತ್ರ — ಉತ್ತಮ ಸಂದೇಶ

ಚಂದ್ರಗ್ರಹಣದ ಆಯಾಮಗಳನ್ನು ನೆಹರು ತಾರಾಲಯದವರು ಕ್ಷಣಕ್ಷಣಕ್ಕೂ ಬಿತ್ತರಿಸಿದ್ದನ್ನು, ತಮ್ಮ ವಾಹಿನಿಯ ಮೂಲಕ ಜನಸಾಮಾನ್ಯರಿಗೆ ತಿಳಿಯಪಡಿಸಿದ ಟಿ.ವಿ. 9ರ ಕಾರ್ಯಕ್ರಮವು ಉತ್ತಮವಾಗಿತ್ತು. ಒಂದು ತಾರಾಲಯ ದರ್ಶನ, ಇನ್ನೊಂದು ದೇವರನ್ನು ಧ್ಯಾನಿಸುತ್ತಿರುವ ಮೈಸೂರಿನ ಚಾಮುಂಡೇಶ್ವರಿ ತಾಣ, ಮತ್ತೊಂದು ಬೆಂಗಳೂರಿನ ಪುರಭವನದ ಹೊರಗೆ ಕುಳಿತು ಊಟ ತಿನ್ನುವ ದೃಶ್ಯ– ಹೀಗೆ ಮೂರು ವಿಭಾಗಗಳಲ್ಲಿ ಕಾರ್ಯಕ್ರಮ ಪ್ರಸಾರ ಮಾಡಲಾಯಿತು. ಈ ಮೂರರ ವಿಶ್ಲೇಷಣೆಗೆ, ಸರಿಯಾದ ಉತ್ತರವನ್ನು ನೀಡಿದ ಪುರಾತತ್ವ ಇಲಾಖೆಯ ಶೆಲ್ವಪಿಳ್ಳೆ ಅಯ್ಯಂಗಾರ್ ಅವರ ಸಂದೇಶವು ಆಪ್ಯಾಯಮಾನವಾಗಿತ್ತು.

—ಲಲಿತಾ ಅಂಬಾಗಿಲು, ಉಪ್ಪುಂದ

## ನಗು ಬರಿಸದ 'ಮಜಾ'

ಮಜಾ ಟಾಕೀಸ್‌ನಲ್ಲಿ ಮಜಾ ಎನ್ನುವ ಪದವೇ ಸರಿಯಲ್ಲ! ಸೃಜನ್ ಲೋಕೇಶ್ ಧಾರಾವಾಹಿಗಳ– ಸಿನಿಮಾಗಳ ನಟ ನಟಿಯರನ್ನು ಕರೆಸಿ ಅವರ ಮುಂದೆ ರಮೇಶ್, ಕುರಿ ಪ್ರತಾಪ್, ಅಪರ್ಣ ಮತ್ತಿಬ್ಬರನ್ನು ಸೇರಿಸಿಕೊಂಡು ಅರ್ಥವಿಲ್ಲದ ಸಂಚಿಕೆಗಳನ್ನು ಸೃಷ್ಟಿಸುತ್ತಿದ್ದಾರೆ. ಇದನ್ನು ನೋಡಿದ ಯಾರಿಗೂ ನಗು ಬಾರದು. ಈಚೆಗೆ ರಂದು 'ಪದ್ಮಾವತಿ' ಧಾರಾವಾಹಿ ಕಲಾವಿದರನ್ನು ಕರೆಸಿದ್ದರು. ಬಹಳ ಕೀಳುಮಟ್ಟದ ಅಸಹ್ಯ ಬರಿಸುವ 'ಮೊದಲ ರಾತ್ರಿ'ಯ ಪ್ರಹಸನವನ್ನು ಬಿತ್ತರಿಸಿದರು. ಪ್ರೇಕ್ಷಕರಲ್ಲಿಯೂ ಬಹಳಷ್ಟು ಸ್ತ್ರೀಯರಿದ್ದರು. ಈ ಕಾರ್ಯಕ್ರಮವನ್ನು ಸ್ತ್ರೀಯರ ಮುಂದೆ ಪ್ರದರ್ಶಿಸಿದ್ದು ಖಂಡನೀಯ.

—ಎಂ. ಸುಬ್ಬಣ್ಣ, ಬೆಂಗಳೂರು

## 'ಫಿನಾಲೆ' ಎಂಬ ಚಿತ್ರಹಿಂಸೆ

ಝೀ ಕನ್ನಡ ವಾಹಿನಿಯಲ್ಲಿ ಕಳೆದ ಭಾನುವಾರ ಸಂಜೆ 6 –9ರವರೆಗೆ ಪ್ರಸಾರವಾದ 'ಸರೆಗಮಪ ಫಿನಾಲೆ' ಕಾರ್ಯಕ್ರಮ ಅತ್ಯಂತ ನಿರಾಶೆಗೊಳಿಸಿತು. 5–6 ಹಾಡುಗಳನ್ನು ಕೇಳಲು ಮೂರು ಗಂಟೆಗಳ ಕಾಲ ಆ್ಯಂಕರ್ ಮತ್ತು ತೀರ್ಪುಗಾರರ ಅಸಾಧ್ಯ ವಾಚಾಳಿತನವನ್ನು ಸಹಿಸಿಕೊಳ್ಳಬೇಕಾಯಿತು. ಒಂದು ಗಂಟೆಯಲ್ಲಿ ಮುಗಿಸಬಹುದಾದ ಕಾರ್ಯಕ್ರಮವನ್ನು ಮೂರು ಗಂಟೆಗೆ ಎಳೆದ ಈ ತಂಡದ ಸದಸ್ಯರಿಗೆ/ ನಿರ್ದೇಶಕರಿಗೆ ಏನೆನ್ನಬೇಕು! ಈ ರೀತಿ 'ದೂರದಿಂದಲೇ ಜೀವ ಹಿಂಡುವ' ಕಾರ್ಯಕ್ರಮಗಳಿಗೆ ಎಂದು ಕೊನೆ?

—ಎಂ.ಎಸ್. ರಾವ್, ಬೆಂಗಳೂರು

## ಕಿನ್ನರಿ ಚುರುಕಾಗಲಿ

ಪುಟ್ಟ ಕಿನ್ನರಿಯ ಧೈರ್ಯ, ಸ್ವಾಭಿಮಾನ, ಬುದ್ಧಿವಂತಿಕೆ, ಚುರುಕುತನ ಕಂಡ ನಮಗೆ ದೊಡ್ಡ ಕಿನ್ನರಿಯ ಅಳುಮುಂಜಿ ಮುಖ, ಅಸಹ್ಯ ತರುವಂತಹ ಒಳ್ಳೆಯತನ ಇಷ್ಟವಾಗುತ್ತಿಲ್ಲ. ಇನ್ನಾದರೂ ಆಕೆ ಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತಾಳೊ ಅಥವಾ ಅಜ್ಜಿಗೆ ಮಾತುಕೊಟ್ಟಿದ್ದೀನಿ ಅಂತ ಅಳುತ್ತಾನೇ ಇರುತ್ತಾಳೋ ಗೊತ್ತಿಲ್ಲ! ಅವಳ ಚಿಕ್ಕಂದಿನ ವಿಜ್ಞಾನಿಯಾಗುವ ಕನಸು ಏನಾಯಿತೋ? ನಿರ್ದೇಶಕರು ಮರೆತು ಬಿಟ್ಟರು ಅಂತ ಕಾಣುತ್ತದೆ. ಒಟ್ಟಿನಲ್ಲಿ ಕಿನ್ನರಿ ಚುರುಕಾಗಿದ್ದರೆ ಸರಿ, ಇಲ್ಲದಿದ್ದರೆ ಬೇಗ ಶುಭಂ ಹೇಳಿದರೆ ಒಳ್ಳೆಯದು ಅನಿಸುತ್ತದೆ.

—ವಿ.ವಿಜಯೇಂದ್ರ ರಾವ್, ಬೆಂಗಳೂರು

## ಇಷ್ಟವಾಗುವ ಹೊರಾಂಗಣ ಚಿತ್ರ

ಝೀ ಕನ್ನಡದ 'ಪತ್ತೇದಾರಿ ಪ್ರತಿಭಾ' ತನ್ನ ಸರಳತೆ, ಅದ್ಭುತ ಪ್ರತಿಭೆಯಿಂದಾಗಿ ವೀಕ್ಷಕರಿಗೆ ಆತ್ಮೀಯಳಾಗಿದ್ದರೆ, ಅದೇ ವಾಹಿನಿಯ 'ನಿಗೂಢ ರಾತ್ರಿಗಳು' (ಮಾಸ್ಟರ್ ಆನಂದ್ ನಿರ್ದೇಶನ) ಮಲೆನಾಡಿನ ರಮ್ಯ ಪ್ರಕೃತಿ ಸೌಂದರ್ಯದ ನಡುವೆ ಅಡಗಿರಬಹುದಾದ ಯಾವುದೋ ನಿಗೂಢತೆಯಿಂದಾಗಿ ಗಮನ ಸೆಳೆಯುತ್ತಿದೆ.

ಸ್ಟಾರ್ ಸುವರ್ಣದ 'ತ್ರಿವೇಣಿ ಸಂಗಮ' ವಿಭಿನ್ನ ಕಥಾವಸ್ತು, ನುರಿತ ಕಲಾವಿದರ ಅಭಿನಯ, ನಯನ ಮನೋಹರ ಪ್ರಕೃತಿ ಚಿತ್ರಣದಿಂದಾಗಿ ಅಲ್ಲಲ್ಲಿ ಲೋಪದೋಷಗಳಿದ್ದರೂ ಸಹ್ಯವೆನಿಸಿದೆ. ಇತ್ತೀಚೆಗೆ ಧಾರಾವಾಹಿಗಳಲ್ಲಿ ಹೊರಾಂಗಣ ದೃಶ್ಯಗಳು ಹೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆ.

—ಮೀರಾ ಮೋಹನ್, ಬೆಂಗಳೂರು

## ಮನೆಹಾಳಿಯರ ಪ್ರಪಂಚ!

ಇತ್ತೀಚಿನ ಧಾರಾವಾಹಿಗಳನ್ನು ನೋಡುತ್ತಿದ್ದರೆ ಜೀವನದಲ್ಲಿ ಜುಗುಪ್ಸೆ ಉಂಟಾಗುತ್ತದೆ. ಮನಸ್ಸಿಗೆ ಮುದ ನೀಡುವ ಸರೆಗಮಪ, ಡ್ರಾಮ ಜೂನಿಯರ್ಸ್ ಮೊದಲಾದ ರಿಯಾಲಿಟಿ ಶೋಗಳೇ ಸಾವಿರ ಪಾಲು ವಾಸಿ. ಮನಸ್ಸು ಘಾಸಿ ಮಾಡಿಕೊಳ್ಳದೆ ಆನಂದದಿಂದ ಕಾರ್ಯಕ್ರಮ ನೋಡಬಹುದು ಎಂದರೆ ತಪ್ಪಾಗಲಾರದು. ಇತ್ತೀಚೆಗೆ ಧಾರಾವಾಹಿಗಳ ಕುಟುಂಬದಲ್ಲಿ ಒಬ್ಬರು ಖಳನಾಯಕಿ ಸಾಲದು ಎಂಬಂತೆ 2–3 ಮಂದಿ ಕಾಣಿಸಿಕೊಳ್ಳುತ್ತಿದ್ದಾರೆ. ಉದಾಹರಣೆ: ಅಗ್ನಿಸಾಕ್ಷಿ, ರಾಧಾ ರಮಣ, ಪದ್ಮಾವತಿ. ಇನ್ನೂ ಅನೇಕ ಧಾರಾವಾಹಿಗಳಲ್ಲಿ ಇದೇ ಗೋಳು. ಗಂಗಾದಲ್ಲಿ ಇಲ್ಲಿಯವರೆಗೆ ಅಜ್ಜಿಯ ಕಾಟ ಸಹಿಸಲು ಅಸಾಧ್ಯವಾಗಿತ್ತು. ಈಗ ಅವಳ ಅಕ್ಕನ ಸರದಿ. ಅವಳು ವಕ್ರಿಸುವ ಪ್ರಮೇಯವೆ ಇರಲಿಲ್ಲ. ತಂಗಿಯ ಕಾಟದ ಜೊತೆ ಅಕ್ಕನ ಕಾಟ. ಒಟ್ಟಿನಲ್ಲಿ ಎಲ್ಲಾ ಧಾರಾವಾಹಿಗಳಲ್ಲಿ 'ಮನೆಹಾಳಿಗಳೆ' ತುಂಬಿದ್ದಾರೆ. ಟಿ.ವಿ. ಧಾರಾವಾಹಿ ಎಂದರೆ ಮನೆಹಾಳಿಯರ ಪ್ರಪಂಚ ಎನ್ನುವಂತಾಗಿದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು